# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1222

ಉತ್ತರಿಸಬೇಕಾದ ದಿನಾಂಕ : 21.08.2025

ಸದಸ್ಯರ ಹೆಸರು : ಶ್ರೀ ಡಿ.ಟಿ.ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಿಂದ ನಡೆಯುತ್ತಿರುವ ಶಾಲೆಗಳು ಎಷ್ಟು; ಯಾವ ಯಾವ ಸ್ಥಳಗಳಲ್ಲಿ ನಡೆಯುತ್ತಿದೆ.</td><td>ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 02 ಕ್ರೀಡಾ ವಸತಿ ಶಾಲೆಗಳು ನಡೆಸಲಾಗುತ್ತಿದೆ.<br><br>ಅವು ಬೆಂಗಳೂರು ನಗರ ಜಿಲ್ಲೆಯ ವಿದ್ಯಾನಗರದಲ್ಲಿ ಹಾಗೂ ಕೊಡಗು ಜಿಲ್ಲೆಯ ಕೂಡಿಗೆಯಲ್ಲಿವೆ.</td></tr>
<tr><td>ಆ</td><td>ಕ್ರೀಡಾ ಚಟುವಟಿಕೆ ಶಾಲೆಗಳಲ್ಲಿ ಯಾವ ಯಾವ ಕ್ರೀಡೆಗಳಲ್ಲಿ ಪ್ರೋತ್ಸಾಹ ನೀಡಲಾಗುತ್ತಿದೆ ಇದಕ್ಕೆ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;</td><td>2025-26 ಸಾಲಿನಲ್ಲಿ ಕ್ರೀಡಾ ವಸತಿ ಶಾಲೆಗಳಲ್ಲಿ ದಾಖಲಾಗಿರುವ ಕ್ರೀಡಾಪಟುಗಳ ಕ್ರೀಡಾವಾರು ವಿವರ ಕೆಳಕಂಡಂತಿದೆ:
<table>
<tr><th>ಕ್ರ.ಸಂ</th><th>ಕ್ರೀಡಾ ಶಾಲೆ / ವಸತಿ ನಿಲಯ</th><th>ಕ್ರೀಡೆ</th><th>ಬಾಲಕರು</th><th>ಬಾಲಕಿಯರು</th><th>ಒಟ್ಟು</th></tr>
<tr><td rowspan="5">1</td><td rowspan="5">ವಿದ್ಯಾನಗರ</td><td>ಅಥ್ಲೆಟಿಕ್ಸ್</td><td>36</td><td>37</td><td>73</td></tr>
<tr><td>ಫುಟ್ ಬಾಲ್</td><td>35</td><td></td><td>35</td></tr>
<tr><td>ಬಾಸ್ಕೆಟ್ ಬಾಲ್</td><td></td><td>22</td><td>22</td></tr>
<tr><td>ವಾಲಿಬಾಲ್</td><td>16</td><td></td><td>16</td></tr>
<tr><td>ಬಾಕ್ಸಿಂಗ್</td><td>23</td><td>11</td><td>34</td></tr>
<tr><td rowspan="3">2</td><td rowspan="3">ಕೂಡಿಗೆ</td><td>ಅಥ್ಲೆಟಿಕ್ಸ್</td><td>27</td><td>21</td><td>48</td></tr>
<tr><td>ಹಾಕಿ</td><td>52</td><td>23</td><td>75</td></tr>
<tr><td>ಜಿಮ್ನಾಸ್ಟಿಕ್ಸ್</td><td>6</td><td>4</td><td>10</td></tr>
</table></td></tr>
<tr><td>ಇ</td><td>ಕ್ರೀಡಾ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ಹಾಗೂ ಕೌಶಲ್ಯ ಭರಿತ ತರಬೇತಿಯನ್ನು ನೀಡಲಾಗುತ್ತಿದೆಯೇ?</td><td>ಹೌದು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿರುವ ಕ್ರೀಡಾ ವಸತಿ ಶಾಲೆಗಳಲ್ಲಿ ದಾಖಲಾಗಿರುವ ಕ್ರೀಡಾಪಟುಗಳಿಗೆ ಪ್ರತಿ ನಿತ್ಯ ಕ್ರೀಡಾ ನ್ಯೂಟ್ರೀಷನಿಸ್ಟ್ ತಯಾರಿಸಿರುವ ಮೆನು ಪಟ್ಟಿಯಂತೆ ಪೌಷ್ಠಿಕ ಊಟೋಪಹಾರ ಹಾಗೂ ನುರಿತ ತರಬೇತುದಾರರಿಂದ ವೈಜ್ಞಾನಿಕ ಕ್ರೀಡಾ ತರಬೇತಿಯನ್ನು ನೀಡಲಾಗುತ್ತಿದೆ.</td></tr>
</table>

**ವೈಎಸ್‌ಡಿ-ಸಿಡಿಎನ್/336/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ